ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

# ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ3(7)ಪ್ರಾ.ಶಿ. ವರ್ಗ-07/2017-18 ದಿನಾಂಕ: 17/09/2018

: ಜ್ಞಾಪನ :

ವಿಷಯ:- 2017-18 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಪರಿಷ್ಕೃತ ವೇಳಾಪಟ್ಟಿ- ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳು, ಕಡ್ಡಾಯ ವರ್ಗಾವಣೆ ಹಾಗು ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತಂತೆ ಸಮಗ್ರ ಪರಿಷ್ಕೃತ ವೇಳಾಪಟ್ಟಿ.

ಉಲ್ಲೇಖ:- 1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2017 (ಸರ್ಕಾರದ ಅಧಿಸೂಚನೆ : ಸಂವ್ಯಶಾಇ 22 ಶಾಸನ 2017 ದಿನಾಂಕ 18/04/2017)

2) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017 (ಸರ್ಕಾರದ ಅಧಿಸೂಚನೆ ಇಡಿ 12 ಇಟಿಆರ್ 2017 ದಿನಾಂಕ 29/11/2017)

3) ಸರ್ಕಾರದ ಆದೇಶ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 19/05/2017 (ವೃಂದ ಬಲದ ಆದೇಶ)

4) ಈ ಕಛೇರಿ ಅಧಿಸೂಚನೆ ಸಂಖ್ಯೆ ಸಿ3(1) ವೃಂದ ಬಲ.ಜಿಲ್ಲಾ ಹಂ / 2017-18 ದಿನಾಂಕ 02/02/2018

5) ಈ ಕಛೇರಿಯ ಏಕಕಡತ ಸಂಖ್ಯೆ ಸಿ3(7) ಪ್ರಾಶಾಶಿ ವರ್ಗ – 07/ 2017-18 ದಿನಾಂಕ

6) ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವರ್ಗಾವಣಾ ವೇಳಾಪಟ್ಟಿ ಜ್ಞಾಪನ ಸಂಖ್ಯೆ: ಸಿ3(7) ಪ್ರಾ.ಶಾ.ಶಿ ವರ್ಗ-07/2017-18 ದಿನಾಂಕ: 29/12/2017, 06/01/2018, 19/01/2018, 09/02/2018, 24/02/2018, 13/03/2018 ಹಾಗು ಸಿ4(7) ಪ್ರೌಶಿವರ್ಗ 29 2017-18 ದಿನಾಂಕ 01/01/2018, 06/01/2018, 19/01/2018, 25/01/2018, 13/03/2018, 06/08/2018, 15/08/2018, ಮತ್ತು 25/08/2018 , ಇತರೆ ಸಂಬಂಧಿತ.

7) ಸರ್ಕಾರದ ಆದೇಶ : ಇಡಿ 9 ಇಟಿಆರ್ 2018 ದಿನಾಂಕ 17/09/2018

---*****---

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (6)ರ ಜ್ಞಾಪನಗಳಲ್ಲಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಮಾರ್ಗಸೂಚಿ ಸಹಿತ ವೇಳಾಪಟ್ಟಿಯನ್ನು ಹೊರಡಿಸಲಾಗಿತ್ತು. ಪ್ರಾಥಮಿಕ ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಕುರಿತಂತೆ ನೀತಿ ಅಂಶಗಳಲ್ಲಿ ಕೆಲವು ಪರಿಷ್ಕರಣೆಗಳನ್ನು ಅಳವಡಿಸಿಕೊಳ್ಳುವಂತೆ ಸರ್ಕಾರದಿಂದ ನೀಡಲಾಗಿದ್ದ ಸೂಚನೆಗಳಿಗನುಸಾರವಾಗಿ ಕೆಳಗಿನಂತೆ ಹೆಚ್ಚುವರಿ ಸೇರಿದಂತೆ ಅನುಕ್ರಮವಾಗಿ ದಿನಾಂಕಗಳನ್ನು ಗುರುತಿಸಿ ಪರಿಷ್ಕೃತ ಸಮಗ್ರ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಶಿಕ್ಷಕರ ಸಂಪನ್ಮೂಲದ ಸಮರ್ಪಕ ಬಳಕೆ ದೃಷ್ಟಿಯಿಂದ ಹೆಚ್ಚುವರಿ ಸೇರಿದಂತೆ ಪ್ರಸ್ತುತ ವರ್ಗಾವಣೆಗಳಲ್ಲಿ ಕೆಳಗಿನ ನಿಯಮಗಳನ್ನೂ ಸಹ ಪರಿಗಣಿಸಲಾಗುವುದು.

1. 2017-18ನೇ ವರ್ಷದಿಂದ 2018-19ನೇ ವರ್ಷಕ್ಕೆ ದಾಖಲಾತಿ ಹೆಚ್ಚಾದ ಶಾಲೆಗಳಲ್ಲಿ ಹೆಚ್ಚಳಗೊಂಡ ದಾಖಲಾತಿಯನ್ನು ಪರಿಗಣಿಸಿ ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಮತ್ತಿತರೆ ವರ್ಗಾವಣೆ ಪ್ರಕ್ರಿಯೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.
2. ಪ್ರಾಥಮಿಕ ಶಾಲೆಗಳಲ್ಲಿನ ಹಿಂದಿ ಶಿಕ್ಷಕರ ಕುರಿತಂತೆ – ಯಾವುದೇ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿಂದಿ ಶಿಕ್ಷಕರನ್ನು ಕಡ್ಡಾಯವಾಗಿ ಹೆಚ್ಚುವರಿ ಎಂಬುದಾಗಿ ಗುರುತಿಸಲಾಗಿದೆ.

Scanned by CamScanner

ನಿಯಮಾನುಸಾರ ಕೌನ್ಸಿಲಿಂಗ್ ಪ್ರಕ್ರಿಯೆ ಮುಖಾಂತರವಾಗಿ ಅಗತ್ಯ ಹಿರಿಯ ಪ್ರಾಥಮಿಕ ಶಾಲೆಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು.

3. ಹೆಚ್ಚುವರಿ ಶಿಕ್ಷಕರ ಗುರುತಿಸುವಿಕೆಯಲ್ಲಿ 2016-17ನೇ ಸಾಲಿನಲ್ಲಿ ಮಲೆನಾಡು ಭಾಗಗಳಿಗೆ ನೀಡಿದ್ದ ರಿಯಾಯಿತಿಯನ್ನು ಈ ವರ್ಷವೂ ಮುಂದುವರೆಸಲಾಗಿದೆ.
4. ದಿನಾಂಕ 15/09/2017 ಹಾಗು ದಿನಾಂಕ 27/09/2017ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರ ಉಪಸ್ಥಿತಿಯಲ್ಲಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಪ್ರಸ್ತಾಪವಾದಂತೆ, ಮುಂದಿನ 03 ವರ್ಷಗಳೊಳಗೆ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ವೃಂದದ ಟಿಜಿಟಿ ಶಿಕ್ಷಕರನ್ನು ಖಾಲಿ ಹುದ್ದೆಗಳ ಲಭ್ಯತೆ ಆಧಾರದ ಮೇಲೆ ಪ್ರೌಢಶಾಲೆಗಳಲ್ಲಿನ ವಿಜ್ಞಾನ-ಪಿಸಿಎಂ ಹುದ್ದೆಗೆ ವರ್ಗಾಯಿಸಲು ಕ್ರಮಕೈಗೊಳ್ಳಬೇಕಾಗಿದ್ದು ಅನುಸಾರವಾಗಿ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
   - 4.1. ಹಾಗೆಯೇ, 1 ರಿಂದ 10 ಅಥವಾ 6 ರಿಂದ 10ನೇ ತರಗತಿಯವರೆಗೆ ನಡೆಯುತ್ತಿರುವ ಪ್ರೌಢಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಪೈಕಿ ಪಿಸಿಎಂ-ವಿಜ್ಞಾನ ಶಿಕ್ಷಕರ ಹುದ್ದೆ ಖಾಲಿ ಇದ್ದು, ಸದರಿ ಶಾಲೆಯಲ್ಲಿನ ಹಿರಿಯ ಪ್ರಾಥಮಿಕ / ಕಿರಿಯ ಪ್ರಾಥಮಿಕ ಘಟಕದಲ್ಲಿ ಟಿಜಿಟಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅಂತಹ ಟಿಜಿಟಿ ಶಿಕ್ಷಕರನ್ನು, ಕಡ್ಡಾಯವಾಗಿ ಪ್ರೌಢಶಾಲೆಯಲ್ಲಿ ಸದರಿ ಖಾಲಿ ಇರುವ ಪಿಸಿಎಂ-ವಿಜ್ಞಾನ ಹುದ್ದೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು. ಪ್ರಾಥಮಿಕ ಘಟಕದಲ್ಲಿ ತೆರವಾಗುವ ಖಾಲಿ ಹುದ್ದೆಯನ್ನು ನಿಯಮಾನುಸಾರ ಪದವೀಧರ ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ವಿಜ್ಞಾನ ಮತ್ತು ಗಣಿತ) ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸಿಕೊಂಡು ವರ್ಗಾವಣೆಗೆ ತೆರಯಲಾಗುತ್ತದೆ. ಪ್ರೌಢಶಾಲೆಗೆ ಹೊಂದಾಣಿಕೆಯಾಗುವ ಟಿಜಿಟಿ ಶಿಕ್ಷಕರ ಕುರಿತಂತೆ ನಿರ್ದೇಶಕರು (ಪ್ರೌಢ ಶಿಕ್ಷಣ)ರವರಿಂದ ಪ್ರಕ್ರಿಯೆ ನಂತರದಲ್ಲಿ ಸಮಗ್ರ ಆಡಳಿತಾತ್ಮಕ ಅನುಮೋದನೆ ಆದೇಶವನ್ನು ಹೊರಡಿಸಲಾಗುತ್ತದೆ. ಆದರೆ, ಹೊಂದಾಣಿಕೆ ನಂತರ ಸದರಿ ಶಿಕ್ಷಕರು ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಆ ಅರ್ಜಿಯನ್ನು ಪರಿಗಣಿಸಿ ಪ್ರೌಢಶಾಲೆಗಳಿಗೆ ವರ್ಗಾವಣೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ.
   - 4.2. ಯಾವುದೇ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರಬಹುದಾದ ಟಿಜಿಟಿ ಶಿಕ್ಷಕರಿಗೆ ವರ್ಗಾವಣೆಗಳಲ್ಲಿ ಮತ್ತೊಂದು ಪ್ರಾಥಮಿಕ ಶಾಲೆಯ ಟಿಜಿಟಿ ಹುದ್ದೆಗೆ ವರ್ಗಾವಣೆ ಪಡೆಯುವುದನ್ನು ನಿರ್ಬಂಧಿಸಿದೆ. ಟಿಜಿಟಿ ಶಿಕ್ಷಕರು ಕೇವಲ ಪ್ರೌಢಶಾಲಾ ಹುದ್ದೆಗಳಿಗೆ ಮಾತ್ರ ವರ್ಗಾವಣೆಗಳನ್ನು ಕೋರಬಹುದಾಗಿರುತ್ತದೆ.
   - 4.3. ಯಾವುದೇ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅಥವಾ ಯಾವುದೇ 1 ರಿಂದ 7ನೇ ತರಗತಿ ಮಾತ್ರ ಇರುವ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಟಿಜಿಟಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಎಲ್ಲ ಟಿಜಿಟಿ ಶಿಕ್ಷಕರನ್ನು ಕಡ್ಡಾಯವಾಗಿ ಹೆಚ್ಚುವರಿ ಎಂಬುದಾಗಿ ಗುರುತಿಸಿ ಪ್ರೌಢಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು. ಸದರಿ ಟಿಜಿಟಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದ ಹುದ್ದೆಯನ್ನು ಪದವೀಧರ ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ವಿಜ್ಞಾನ ಮತ್ತು ಗಣಿತ) ಶಿಕ್ಷಕರ ಹುದ್ದೆಯನ್ನಾಗಿ ನಿಯಮಾನುಸಾರ ಇರುವ ಹುದ್ದೆಯ ಅಗತ್ಯತೆಯ ಮಿತಿಯೊಳಗೆ ಪರಿವರ್ತಿಸಲಾಗುತ್ತದೆ.

ಉಳಿದಂತೆ, ಉಲ್ಲೇಖಿತ ಜ್ಞಾಪನಗಳಲ್ಲಿನ ಎಲ್ಲಾ ಸೂಚನೆಗಳು/ ಮಾರ್ಗಸೂಚಿಗಳು ಯಥಾವತ್ತಾಗಿ ಮುಂದುವರೆಯುತ್ತವೆ.

Scanned by CamScanner

ಅ) **ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ :**

**2018-19 ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳ ವೇಳಾಪಟ್ಟಿ :**

| ಕ್ರಮ ಸಂಖ್ಯೆ | ವಿವರ | ದಿನಾಂಕಗಳು | ಕ್ರಮವಹಿಸುವ ಅಧಿಕಾರಿಗಳು |
|---|---|---|---|
| 1 | ಟಿಡಿಎಸ್ ನಲ್ಲಿ ಹಾಗು ವರ್ಗಾವಣಾ ತಂತ್ರಾಂಶದಲ್ಲಿ ಶಾಲೆಗಳ ವಲಯದ ವಿವರಗಳನ್ನು ಇಂದೀಕರಿಸುವುದು | ಪ್ರಕ್ರಿಯೆ ಪೂರ್ಣಗೊಂಡಿದೆ. | |
| 2 | ಶಾಲಾವಾರು ಖಾಲಿ ಹುದ್ದೆಗಳ ಮತ್ತು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ (ವಿಷಯವಾರು) ಸಂಖ್ಯೆ ಪಟ್ಟಿಯನ್ನು ಆನ್-ಲೈನ್ ನಲ್ಲಿ ಮತ್ತು ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು. | 19/09/2018 | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು |
| 3 | ಹೆಚ್ಚುವರಿಯಾಗುವ ಶಿಕ್ಷಕರ ಸ್ಥಳ ಮತ್ತು ವಿಷಯವಾರು ಶಿಕ್ಷಕರ ಹೆಸರುಗಳ ತಾತ್ಕಾಲಿಕ ಪಟ್ಟಿಯನ್ನು ಆನ್-ಲೈನ್ ನಲ್ಲಿ ಮತ್ತು ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು. | 22/09/2018 | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು |
| 4 | ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿಗೆ ಶಿಕ್ಷಕರುಗಳು ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿ | 22/09/2018 ರಿಂದ 24/09/2018 | 1. ಸಂಬಂಧಪಟ್ಟ ಶಿಕ್ಷಕರು<br>2. ಕ್ಷೇತ್ರಶಿಕ್ಷಣಾಧಿಕಾರಿಗಳು |
| 5 | ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಶಿಕ್ಷಕರ ಸೇವಾ ದಾಖಲೆಗಳೊಂದಿಗೆ ಪರಿಶೀಲಿಸಿ, ಆಕ್ಷೇಪಣೆಯನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವುದು (ಆನ್-ಲೈನ್ ನಲ್ಲಿ) | 22/09/2018 ರಿಂದ 25/09/2018 | ಕ್ಷೇತ್ರಶಿಕ್ಷಣಾಧಿಕಾರಿಗಳು |
| 6 | 1. ಕ್ಷೇತ್ರಶಿಕ್ಷಣಾಧಿಕಾರಿಗಳು ಸಲ್ಲಿಸಿರುವ ಪಟ್ಟಿಯನ್ನು ಪರಿಶೀಲಿಸಿ ಜಿಲ್ಲಾ ಹಂತದಲ್ಲಿ ಆನ್-ಲೈನ್‌ನಲ್ಲಿ ಹೆಚ್ಚುವರಿ ಶಿಕ್ಷಕರ ಅಂತಿಮ ಆಧ್ಯತಾ ಪಟ್ಟಿಯ ಪ್ರಕಟಣೆ<br>2. ಆನ್-ಲೈನ್‌ನಲ್ಲಿ ಖಾಲಿ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟಿಸುವುದು | 26/09/2018 | ಉಪನಿರ್ದೇಶಕರು(ಆಡಳಿತ) |
| 7 | ಪ್ರಾಥಮಿಕಶಾಲಾ ಶಿಕ್ಷಕರ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆ- ಆನ್-ಲೈನ್‌ನಲ್ಲಿ ಮೊದಲನೇ ಹಂತದಲ್ಲಿ ತಾಲ್ಲೂಕು ವ್ಯಾಪ್ತಿಗೆ ಮತ್ತು ಎರಡನೇ ಹಂತದಲ್ಲಿ ಜಿಲ್ಲಾ ಹಂತಕ್ಕೆ | 27/09/2018 ರಿಂದ 28/09/2018 | ಉಪನಿರ್ದೇಶಕರು(ಆಡಳಿತ) |
| 8 | ಕೌನ್ಸಿಲಿಂಗ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಶಿಕ್ಷಕರ ಮಾಹಿತಿಯನ್ನು ಟಿಡಿಎಸ್‌ನಲ್ಲಿ ಅಳವಡಿಸಿ ಕಡ್ಡಾಯ / | 29/09/2018 | ಉಪನಿರ್ದೇಶಕರು(ಆಡಳಿತ) |

Scanned by CamScanner

| | | | |
|---|---|---|---|
| | ಐಚ್ಛಿಕ/ಪರಸ್ಪರ ವರ್ಗಾವಣೆ ಪಟ್ಟಿಯಿಂದ ಅಂತಹ ಶಿಕ್ಷಕರ ಹೆಸರುಗಳನ್ನು ತೆಗೆಯುವ ಕ್ರಮ. ಶಿಕ್ಷಕರ ಪಟ್ಟಿ ಹಾಗೂ ಅಂಕಿ-ಅಂಶ ಸಹಿತ ವರದಿಯನ್ನು ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಇವರಿಗೆ ಸಲ್ಲಿಸುವ ದಿನಾಂಕ. | | |

**ಕಡ್ಡಾಯ/ಕೋರಿಕೆ/ಪರಸ್ಪರ ವರ್ಗಾವಣೆಗಳ ಪರಿಷ್ಕೃತ ವೇಳಾಪಟ್ಟಿ**

| ಕ್ರ.ಸಂ | ವಿವರ | ಪರಿಷ್ಕೃತ ದಿನಾಂಕಗಳು | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| | **ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತು ಕ್ರಮಗಳು** | | |
| 1 | ಕೋರಿಕೆ ವರ್ಗಾವಣೆ ಬಯಸುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಅರ್ಜಿಗಳನ್ನು ಕರೆಯಲು ಕ್ರಮ | ಪ್ರಕ್ರಿಯೆ ಮುಗಿದಿದೆ | |
| 2. | ವರ್ಗಾವಣೆ ಕೋರುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ, ಅಂತರ್ಜಾಲದ [on line] ಮೂಲಕ ಅರ್ಜಿ ಸಲ್ಲಿಸಿ ಆನ್-ಲೈನ್ ಸ್ವೀಕೃತಿ ಪಡೆಯಲು ನಿಗದಿಪಡಿಸಿರುವ ಅವಧಿ | ಪ್ರಕ್ರಿಯೆ ಮುಗಿದಿದೆ | |
| 3. | ಆನ್-ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆದು, ಶಿಕ್ಷಕರು ತಮ್ಮ ಸಹಿಯನ್ನು ನಮೂದಿಸಿ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ ಸಲ್ಲಿಸಲು ನಿಗಧಿ ಪಡಿಸಿರುವ ಅವಧಿ | ಪ್ರಕ್ರಿಯೆ ಮುಗಿದಿದೆ | |
| 4 | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಸಂಬಂಧಿಸಿದಂತೆ (ಘಟಕದ ಒಳಗಿನ ಮತ್ತು ಘಟಕದ ಹೊರಗಿನ) ತಾತ್ಕಾಲಿಕ ಆದ್ಯತಾ ಪಟ್ಟಿ ಪ್ರಕರಣ | 19/09/2018 | **1)** ಪ್ರಾಥಮಿಕ ಶಿಕ್ಷಣ ನಿರ್ದೇಶಕರು,<br>**2)** ಅಪರ ಆಯುಕ್ತರ ಕಛೇರಿ, ಧಾರವಾಡ<br>**3)** ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>**4)** ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು/<br>**5)** ಆಯುಕ್ತಾಲಯದ ಜಂಟಿ ನಿರ್ದೇಶಕರು, ಧಾರವಾಡ/ಗುಲ್ಬರ್ಗಾ<br>**6)** ಉಪನಿರ್ದೇಶಕರು(ಆಡಳಿತ)<br>**7)** ಕ್ಷೇತ್ರಶಿಕ್ಷಣಾಧಿಕಾರಿಗಳು |
| 5 | ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗಳಿಗೆ ಸಂಬಂಧಿಸಿದ ತಾತ್ಕಾಲಿಕ ಆದ್ಯತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು (ಘಟಕದ ಹೊರಗೆ ಮತ್ತು ಒಳಗೆ) ಸಲ್ಲಿಸಲು ನಿಗಧಿಪಡಿಸಿರುವ ಅವಧಿ. | 19/09/2018 ರಿಂದ 25/09/2018 | ಸಂಬಂಧಿಸಿದ ಶಿಕ್ಷಕರುಗಳು<br>ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 6 | ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿ ಸೇವಾದಾಖಲೆಗಳೊಂದಿಗೆ ತಾಳೆ ನೋಡಿ ಅಂತರ್ಜಾಲದಲ್ಲಿ [on-line] ಅರ್ಜಿಗಳನ್ನು ಪರಿಶೀಲಿಸಿ, ನ್ಯೂನತೆಗಳಿದ್ದಲ್ಲಿ ಸರಿಪಡಿಸಿ/ ಆಕ್ಷೇಪಣೆಗಳನ್ನು ಪರಿಗಣಿಸಿ ಮಾಹಿತಿಗಳನ್ನು ದೃಢೀಕರಿಸಿ ಅರ್ಜಿಗಳನ್ನು ಆನ್-ಲೈನ್‌ನಲ್ಲಿ ಅನುಮೋದಿಸಲು ನಿಗದಿ ಪಡಿಸಿರುವ ಅವಧಿ | 19/09/2018 ರಿಂದ 26/09/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು |

Scanned by CamScanner

| | | | |
|---|---|---|---|
| 7 | ವರ್ಗಾವಣೆ ತಂತ್ರಾಂಶದಲ್ಲಿ ಅನುಮೋದಿಸಿ ಪಟ್ಟಿಯನ್ನು ಸಂಬಂಧಿಸಿದ ಉಪನಿರ್ದೇಶಕರಿಗೆ ದೃಢೀಕೃತ ದಾಖಲೆಗಳೊಂದಿಗೆ ಮುದ್ದಾಂ ಸಲ್ಲಿಸಬೇಕಾದ ದಿನಾಂಕ. (ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು, ಆದ್ಯತಾ ಪಟ್ಟಿಗನುಸಾರ ಅದೇ ಕ್ರಮದಲ್ಲಿ ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | 27/09/2018 | 1) ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) |
| | **ಕಡ್ಡಾಯ ವರ್ಗಾವಣೆ ಕ್ರಮಗಳು**<br>**(ಕಡ್ಡಾಯ ವರ್ಗಾವಣೆಗಳ ಕುರಿತಂತೆ ಕ್ಷೇತ್ರಶಿಕ್ಷಣಾದಿಕಾರಿಗಳ/ಉಪನಿರ್ದೇಶಕರ ಹಂತದಲ್ಲಿ ಪೂರ್ವಭಾವಿ ಕ್ರಮಗಳು** | | |
| 1 | ಕಡ್ಡಾಯ ವರ್ಗಾವಣೆಗಳು: ನಿಯಮ 21(3) ರನ್ವಯ-ಮೊದಲನೇ ಹಂತದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮಂಜೂರಾದ ವೃಂದಬಲದ ಶೇ 20 ಮತ್ತು ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳಲು ಪಟ್ಟಿ ಪ್ರಕಟ ಹಾಗು ಸ್ಥಳ ನಿಯುಕ್ತಿ | ಈಗಾಗಲೇ ಪ್ರಕ್ರಿಯೆ ಮುಗಿದಿದೆ | ಉಪನಿರ್ದೇಶಕರು(ಆಡಳಿತ) ಸಹಯೋಗ – ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು |
| 2 | "ಎ"ವಲಯದಲ್ಲಿ 10 ವರ್ಷಕ್ಕಿಂತಲೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪಟ್ಟಿಯನ್ನು, ವರ್ಗಾವಣೆಗೆ ನಿಗದಿಪಡಿಸಿದ ಮಿತಿಗೊಳಪಟ್ಟ ಸಂಖ್ಯೆಯನ್ನು ಗಮನಿಸಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವುದು | 29/09/2018 ರಿಂದ 04/10/2018 | |
| 3 | ಹೆಚ್ಚುವರಿ ಶಿಕ್ಷಕರ ಮರುನಿಯುಕ್ತಿ ಪೂರ್ಣಗೊಳಿಸಿದ ನಂತರ ಮೇಲಿನಂತೆ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಿ ಪಟ್ಟಿಯನ್ನು ಅಂತಿಮಗೊಳಿಸುವುದು. | 29/09/2018 ರಿಂದ 05/10/2018 | |
| 4 | ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ (ಆನ್-ಲೈನ್) 'ಎ' ವಲಯದಲ್ಲಿನ ಶಿಸ್ತು ಪ್ರಕರಣಗಳ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸುವುದು. | 05/10/2018 | |
| 5 | ಕಡ್ಡಾಯ ವರ್ಗಾವಣೆಗೊಳಪಡುವ ಶಿಕ್ಷಕರ ಹುದ್ದೆಗಳನ್ನು ಡೀಮ್ಡ್ (ಪರಿಗಣಿತ) ಹುದ್ದೆಗಳು ಎಂಬುದಾಗಿ ಪರಿಗಣಿಸಿದಂತೆ ಕೋರಿಕೆ ವರ್ಗಾವಣೆಗೆ ಲಭ್ಯವಿರುವ ಎಲ್ಲ ಖಾಲಿ ಹುದ್ದೆಗಳನ್ನು ಪ್ರಕಟಿಸುವುದು (ಡೀಮ್ಡ್ ಹುದ್ದೆಗಳನ್ನು 'ಸಿ' ವಲಯದ ಘಟಕದೊಳಗಿನ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಶಿಕ್ಷಕರಿಗೆ ಮಾತ್ರ ಪರಿಗಣಿಸತಕ್ಕದ್ದು) | 06/10/2018 | ಉಪನಿರ್ದೇಶಕರು(ಆಡಳಿತ) |

Scanned by CamScanner

| | | | |
|---|---|---|---|
| **6** | ಕಡ್ಡಾಯ ವರ್ಗಾವಣೆ – ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಎ ವಲಯದಲ್ಲಿ ಹತ್ತು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರನ್ನು ವಲಯ 'ಎ' ದಿಂದ ವಲಯ 'ಸಿ' ಗೆ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ (ಶೇಕಡ 20ಕ್ಕಿಂತ ಹೆಚ್ಚಿನ ಖಾಲಿ ಹುದ್ದೆ ಇರುವ ತಾಲ್ಲೂಕಿಗೆ ಆದ್ಯತೆ) | ಪ್ರಕ್ರಿಯೆ ಮುಗಿದಿದೆ | |
| **7** | **ಕಡ್ಡಾಯ ವರ್ಗಾವಣೆ – ಸೆಕ್ಷನ್ 3ಎ(1)(2) ರಂತೆ** | | |
| | 'ಎ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು)<br>'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | 13/10/2018 ರಿಂದ 15/10/2018 | ಉಪನಿರ್ದೇಶಕರು (ಆಡಳಿತ) |
| | ಕ್ರಿಮಿನಲ್ / ಶಿಸ್ತು ಪ್ರಕರಣಗಳನ್ನೆದುರಿಸುತ್ತಿರುವ ಶಿಕ್ಷಕರ ವರ್ಗಾವಣೆ | 16/10//2018 | ಉಪನಿರ್ದೇಶಕರು (ಆಡಳಿತ) |
| | **ಕೋರಿಕೆ ವರ್ಗಾವಣೆಗಳು ಮತ್ತು ಪರಸ್ಪರ ವರ್ಗಾವಣೆಗಳ ಮುಂದುವರೆದ ಕ್ರಮಗಳು** | | |
| **8** | ಪರಸ್ಪರ ವರ್ಗಾವಣೆಗಳ (ಘಟಕದ ಒಳಗೆ / ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ (ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 30/09/2018 | 1) ಉಪನಿರ್ದೇಶಕರು[ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು<br>2) ಸಹನಿರ್ದೇಶಕರು, ಧಾರವಾಡ/ ಗುಲ್ಬಾರ್ಗಾ<br>3) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ |
| **9** | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಘಟಕದ ಒಳಗೆ ಪ್ರಾಥಮಿಕ ಶಾಲಾ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿ (Final list) ಪ್ರಕಟಣೆ (ಆನ್‌–ಲೈನ್) (ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 30/09/2018 | ಉಪನಿರ್ದೇಶಕರು(ಆಡಳಿತ) |
| **10** | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| | 'ಬಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್<br>'ಸಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು)<br>'ಸಿ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | 03/10/2018 ರಿಂದ 10/10/2018 | |

Scanned by CamScanner

| | | | |
|---|---|---|---|
| **11** | ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು / ಹಿರಿಯ ಮುಖ್ಯ ಶಿಕ್ಷಕರು/ ವಿಶೇಷ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| | 'ಬಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್<br>'ಸಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು)<br>'ಸಿ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | 11/10/2018 ರಿಂದ 12/10/2018 | |
| **12** | ಅಂತರ್ ಘಟಕ ಕೋರಿಕೆ / ಪರಸ್ಪರ ವರ್ಗಾವಣೆ ಪ್ರಕರಣಗಳಲ್ಲಿ, ಉಪನಿರ್ದೇಶಕರು [ಆಡಳಿತ] ಇವರು ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಪಡೆದ ಆದ್ಯತೆಯ ದೃಢೀಕೃತ ಪ್ರಮಾಣ ಪತ್ರಗಳನ್ನು, ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳಿಗೆ, ವಿಭಾಗೀಯ ಸಹನಿರ್ದೇಶಕರು/ ಅಪರ ಆಯುಕ್ತಾಲಯದ ಸಹ ನಿರ್ದೇಶಕರು ಮತ್ತು ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಇವರಿಗೆ ಮುದ್ದಾಂ ಸಲ್ಲಿಸಬೇಕಾದ ದಿನಾಂಕ (ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | 1)ವಿಭಾಗೀಯಸಹನಿರ್ದೇಶಕರಿಗೆ (ವಿಭಾಗದ ಒಳಗಿನ ಅಂತರ್ ಜಿಲ್ಲಾ ವರ್ಗಾವಣೆ ಪ್ರಕರಣಗಳು ಮತ್ತು ಅಂತರ್ ವಿಭಾಗದ ವರ್ಗಾವಣೆ ಪ್ರಕರಣಗಳ ಪಟ್ಟಿಯ ಪ್ರತಿ)ದಿ: 10/10/2018<br><br>2) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ (ಅಂತರ್ ವಿಭಾಗದ ವರ್ಗಾವಣೆ ಪ್ರಕರಣಗಳು) – 11/10/2018 | 1) ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು<br>3) ಅಪರ ಆಯುಕ್ತಾಲಯದ<br>4) ಸಹನಿರ್ದೇಶಕರು, ಧಾರವಾಡ /ಗುಲ್ಬರ್ಗಾ<br>5) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ |
| | **ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳು – ಮುಂದುವರೆದ ಕ್ರಮಗಳು** | | |
| **14** | ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ (ಘಟಕದ ಒಳಗೆ) | 16/10/2018 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| **13** | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ (ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ (Final list) ಪ್ರಕಟಣೆ | 17/10/2018 | 1)ಆಯುಕ್ತರ ಕಛೇರಿ, ನಿರ್ದೇಶಕರು (ಪ್ರಾಥಮಿಕ)<br>2)ಸಹನಿರ್ದೇಶಕರು,ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>3)ಸಹನಿರ್ದೇಶಕರು,ಬೆಂಗಳೂರು/ ಮೈಸೂರು |
| **15** | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | 22/10/2018 ರಿಂದ 02/11/2018 (ವಿಭಾಗದೊಳಗಿನ ಅಂತರ್ ಘಟಕ ಮತ್ತು ವಿಭಾಗದ ಹೊರಗಿನ ಅಂತರ್ | • ವಿಭಾಗದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು – ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>• ಅಂತರ್ ವಿಭಾಗದ ವರ್ಗಾವಣೆಗಳು – ವರ್ಗಾವಣಾ ಪ್ರಾಧಿಕಾರಿಯವರು ಆನ್–ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ |

Scanned by CamScanner

| | | | |
|---|---|---|---|
| | | ಘಟಕ ವರ್ಗಾವಣೆಗಳಿಗೆ , ವೇಯ್ಟೆಡ್ ಅಂಕಗಳ ಆಧಾರದಲ್ಲಿದ್ದಂತೆ ಒಂದೇ ಆದ್ಯತಾ ಪಟ್ಟಿಯನ್ನು ಅನುಸರಿಸಲಾಗುತ್ತದೆ) | ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. ವರ್ಗಾವಣಾ ಆದೇಶದಲ್ಲಿ ನಿರ್ದೇಶಕರ ಮೇಲು ಸಹಿಯನ್ನು ಪಡೆದು ಆದೇಶಗಳನ್ನು ಹೊರಡಿಸತಕ್ಕದ್ದು. |
| **16** | ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್‌ಗೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ (ಘಟಕದ ಹೊರಗೆ)<br>ಒಂದನೇ ಹಂತದಲ್ಲಿ "ವಿಭಾಗದ ಒಳಗೆ ಎರಡನೇಯ ಹಂತದಲ್ಲಿ" ಅಂತರ್ ವಿಭಾಗ | 03/11/2018 ಮತ್ತು<br>04/11/2018 | • ವಿಭಾಗದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು – ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>• ಅಂತರ್ ವಿಭಾಗದ ವರ್ಗಾವಣೆಗಳು – ವರ್ಗಾವಣಾ ಪ್ರಾಧಿಕಾರಿಯವರು ಆನ್-ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ವರ್ಗಾವಣಾ ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. |

**ಅಡಕ: ಉಲ್ಲೇಖಿತ ಜ್ಞಾಪನಗಳ ಪ್ರತಿಗಳು**

**(ಡಾ|| ಪಿ.ಸಿ.ಜಾಫರ್, ಭಾ.ಆ.ಸೇ)**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ,**

1. **ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ**
2. **ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ**
3. **ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)**
4. **ಹಿರಿಯ ಸಹಾಯಕ ನಿರ್ದೇಶಕರು ಹಾಗು ಸಹಾಯಕ ನಿರ್ದೇಶಕರು,, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ ಈಗಾಗಲೇ ಸಭೆಯಲ್ಲಿ ಸೂಚಿಸಿರುವಂತೆ 'ತಂತ್ರಾಂಶವನ್ನು' ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.**
5. **ಕಾರ್ಯಕ್ರಮಾಧಿಕಾರಿಗಳು , ಸ್ಯಾಟ್ಸ್ (ಡೈಸ್) ಶಾಖೆ , ಇವರಿಗೆ ಸೂಕ್ತ ಕ್ರಮಕ್ಕಾಗಿ.**

**ಪ್ರತಿಯನ್ನು:-**

1. **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.**
2. **ಆಪ್ತ ಕಾರ್ಯದರ್ಶಿಯವರು, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.**

Scanned by CamScanner

3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
10. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
11. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
12. ಇಲಾಖಾ ವೆಬ್-ಸೈಟ್ನಲ್ಲಿ ರಾಜ್ಯದ ಎಲ್ಲಾ ಶಿಕ್ಷಕರ ಮತ್ತು ಇತರೆ ಸಾರ್ವಜನಿಕರ ಮಾಹಿತಿಗೆ ಪ್ರಕಟಣೆಗೆ
13. ಕಛೇರಿ ಪ್ರತಿ.

Scanned by CamScanner